**ಓ. ಎಸ್. ನಂಃ 143-2015**
**ಪಿ. ಡಬ್ಲ್ಯೂ ಃ 1**

**ದಿಃ 07.01.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 5, 6, 8 ಮತ್ತು 11ನೇ ಪ್ರತಿವಾದಿ ಪರ ಶ್ರೀ ಎ.ಎಸ್.ಎಸ್. ವಕೀಲರಿಂದ**

16. ಈ ದಾವೆಯಲ್ಲಿ ಓ.ಎಸ್. 52/1994 ರಲ್ಲಿ ಡಿಕ್ರಿಯಲ್ಲಿ ಶಾರದಮ್ಮರವರಿಗೆ ಎಷ್ಟು ವಿಸ್ತೀರ್ಣಗಳು ಆಸ್ತಿ ಆಗಿದೆ ಎಂದು ಬರೆಸಿಲ್ಲ ಎಂದರೆ ಸರಿ. 1ನೇ ದಾವಾ ಸ್ವತ್ತು ಸರ್ವೆ ನಂ. 29/1 ರಲ್ಲಿ ಕೆಂಪದಾಸಯ್ಯ ಮಗಳ ಹೆಸರಿಗೆ ದಾನ ಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರೂ ಕೂಡ ಆ ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಎ ಸಿ ನ್ಯಾಯಾಲಯದಲ್ಲಿ ಆ ಸ್ವತ್ತಿಗೆ ಕೇಸು ವಿಚಾರಣೆಯಲ್ಲಿರುವುದನ್ನು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ಐಟಂ ನಂ. 1 ಸರ್ವೆ ನಂ. 29/1 ರಲ್ಲಿ ಕೆಂಪಾಪುರ ಗ್ರಾಮದ ಹನುಮಂತಯ್ಯನವರಿಗೆ ಕೆಂಪದಾಸಯ್ಯನವರು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಆ ಸ್ವತ್ತಿನ ಪಹಣಿಯನ್ನು ನೋಡಿರುವುದಿಲ್ಲ. ಆ ಸರ್ವೆ ನಂ. ಸ್ವತ್ತು ಯಾರ ಯಾರ ಹೆಸರಿನಲ್ಲಿದೆ ಎಂದು ನಾನು ತಿಳಿದುಕೊಂಡಿಲ್ಲ. ನಾನು ಆ ಸ್ವತ್ತಿನಲ್ಲಿ ಯಾರು ಯಾರು ಸ್ವಾಧೀನದಲ್ಲಿದ್ದಾರೆ ಎಂದು ಪರಿಶೀಲನೆ ಮಾಡಿಲ್ಲ.

17. ಕೆಂಪದಾಸಯ್ಯನವರ ಮಗಳು ಜಯಲಕ್ಷ್ಮಮ್ಮ ಹಾಗೂ ಹನುಮಂತಯ್ಯ ಆ ಸ್ವತ್ತಿನಲ್ಲಿ ಸ್ವಾಧೀನ ಇರುವುದು ಹಾಗೂ ಅವರಿಗೆ ಖಾತೆ ಆಗಿರುವುದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸರ್ವೆ ನಂ. 36/1 ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಬೆಣ್ಣಪ್ಪನ ಪಾಳ್ಯದಲ್ಲಿ ಸರ್ಕಾರಿ ಶಾಲೆ ಇದೆ. ಕೆಂಪದಾಸಯ್ಯ ಹಾಗೂ ಸಿಂಗ್ರಯ್ಯ ಸದರಿ ಐಟಂ ನಂ. 2 ಸರ್ವೆ ನಂ. 36/1 ರಲ್ಲಿ 20 ಗುಂಟೆಯನ್ನು ಸದರಿ ಶಾಲೆಗೆ ದಾನ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾನ ಮಾಡಿರುವುದು ಹಾಗೂ ಮೇಲೆ ಹೇಳಿದ ಶಾಲೆ ಆ ದಾನ ಮಾಡಿರುವ ಸ್ವತ್ತಿನಲ್ಲಿರುವುದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಕೆಂಪದಾಸಯ್ಯನವರು ಐಟಂ ನಂ. 2 ರ ಸರ್ವೆ ನಂ. 36/3 ನ್ನು 3ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಾನ ಪತ್ರದ ಆಧಾರದಲ್ಲಿ ಅವರ ಹೆಸರಿಗೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

18. ಐಟಂ ನಂ. 2 ರಲ್ಲಿ ಸರ್ವೆ ನಂ. 36/2 ರ ಸ್ವತ್ತು ಹಾಗೂ ಐಟಂ ನಂ. 3 ರಲ್ಲಿ 1 ಎಕರೆ 10 ಗುಂಟೆ ಹಾಗೂ 5 ನೇ ಐಟಂ ನಲ್ಲಿ ಸರ್ವೆ ನಂ. 95/1 ಎ ಸ್ವತ್ತು 12 ನೇ ಪ್ರತಿವಾದಿಗೆ ಓ ಎಸ್ 52/1994 ರಂತೆ ಡಿಕ್ರಿ ಆಗಿ ಖಾತೆ ಆಗಿದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಕೆಂಪದಾಸಯ್ಯ ಐಟಂ ನಂ. 3 ರಲ್ಲಿ 2 ಎಕರೆ 24 ಗುಂಟೆಯನ್ನು ದಾನ ಪತ್ರದ ಮೂಲಕ ಕೊಟ್ಟು ಖಾತೆ ಆಗಿ ಅವರು ಸ್ವಾಧೀನ ಇರುವ ವಿಚಾರ ನನಗೆ ಗೊತ್ತು ಹಾಗೂ ಆ ವಿಚಾರವನ್ನು ನಾನು ಆ ದಾವೆಯಲ್ಲಿ ಹೇಳಿಲ್ಲ ಅಂದರೆ ಸರಿಯಲ್ಲ. ಐಟಂ ನಂ, 4 ಸರ್ವೆ ನಂ. 98/2 ನಮ್ಮ ಕುಟುಂಬಕ್ಕೆ ಸೇರದ ಸ್ವತ್ತು ಅಂದರೆ ಸರಿಯಲ್ಲ. ಐಟಂ ನಂ. 4 ರ ಸರ್ವೆ ನಂ. 96/3 4 ಗುಂಟೆ ಮಾತ್ರ ಇದ್ದರೂ ಕೂಡ 14 ಗುಂಟೆ ಎಂದು ಸುಳ್ಳಾಗಿ ಬರೆಸಿದ್ದೇನೆ ಅಂದರೆ ಸರಿಯಲ್ಲ. ಮೇಲೆ ಹೇಳಿದ 12 ನೇ ಪ್ರತಿವಾದಿಯೇ ಆ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 6 ನೇ ಐಟಂ ನಮ್ಮ ಕುಟುಂಬಕ್ಕೆ ಸೇರದ ಸ್ವತ್ತು ಎಂದರೆ ಸರಿಯಲ್ಲ.

19. 7 ನೇ ಸ್ವತ್ತನ್ನು 3 ನೇ ಪ್ರತಿವಾದಿಗೆ ಕೆಂಪದಾಸಯ್ಯ ದಾನ ಪತ್ರದ ಮೂಲಕ ಬರೆದುಕೊಟ್ಟು ಅವರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಅಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಖಾತೆ ಕೂಡ ಇದೆ ಅಂದರೆ ನನಗೆ ಗೊತ್ತಿಲ್ಲ. ಐಟಂ ನಂ. 8 ರಲ್ಲಿ 15 ಗುಂಟೆ ಜಮೀನನ್ನು ಸರ್ಕಾರಿ ಹೈಸ್ಕೂಲ್ ಗೆ 11 ನೇ ಪ್ರತಿವಾದಿ ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರ ಗೊತ್ತಿದ್ದರೂ ಕೂಡ ದಾವೆಯಲ್ಲಿ ಅದನ್ನು ಹೇಳದೆ ಅವರುಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಐಟಂ ನಂ. 8 ರಲ್ಲಿ 1 ಎಕರೆ 10 ಗುಂಟೆ 12 ನೇ ಪ್ರತಿವಾದಿಗೆ ಮೇಲ್ಕಂಡ ಡಿಕ್ರಿಯ ಪ್ರಕಾರ ಸ್ವಾಧೀನಾನುಭವ ಇದೆ ಅಂದರೆ ಸರಿಯಲ್ಲ.

20. ದಾವಾ ಸ್ವತ್ತುಗಳ ಕಂದಾಯ ದಾಖಲೆಗಳು ಯಾರ ಹೆಸರಿನಲ್ಲಿದೆ ಎಂದು ನನಗೆ ಹೇಳಲಾಗುವುದಿಲ್ಲ. ದಾವಾ ಸ್ವತ್ತಿನ ಬಗ್ಗೆ ಏನೇನು ವ್ಯವಹಾರಗಳು ನಡೆದಿವೆ ಎಂದು ನನಗೆ ಗೊತ್ತಿಲ್ಲ. 12 ನೇ ಪ್ರತಿವಾದಿ ದಾವೆ ಹಾಕಿದಾಗ ಕೆಂಪದಾಸಯ್ಯ, ಸಿಂಗ್ರಯ್ಯ ಹಾಗೂ ಕಲ್ಯಾಣಯ್ಯ ಭಾಗ ಮಾಡಿಕೊಂಡು ಅವರವರ ಸ್ವಾಧೀನದಲ್ಲಿ ಇದ್ದಾರೆ ಅಂದರೆ ಸರಿಯಲ್ಲ. ಅವರ ಮಕ್ಕಳು ಕೂಡ ಅವರವರ ಸ್ವತ್ತುಗಳನ್ನು ಅವರವರ ಮಧ್ಯೆ ಭಾಗ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಅಂದರೆ ಸರಿಯಲ್ಲ. ಆ ಭಾಗ ಮಾಡಿದಾಗ ಸರ್ವೆ 29/1 ರಲ್ಲಿ 2 ಎಕರೆ ಹಾಗೂ 29/2 ರಲ್ಲಿ 1 ಎಕರೆ 20 ಗುಂಟೆಯನ್ನು ಸಿಂಗ್ರಯ್ಯ ನವರು ಅವರ ಮತ್ತು ಅವರ ಹೆಂಡತಿಯ ಜೀವನಾಂಶಕ್ಕಾಗಿ ಇಟ್ಟುಕೊಂಡಿದ್ದರು ಅಂದರೆ ಸರಿಯಲ್ಲ. ಸಿಂಗ್ರಯ್ಯ ಮೃತ ಪಟ್ಟ

ನಂತರ ಅವರ ಹೆಂಡತಿ ಆ ಸ್ವತ್ತುಗಳನ್ನು ಅನುಭವಿಸಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ.

21. ಬೆಟ್ಟಸ್ವಾಮಯ್ಯ ಮಗ ಲೋಕೇಶ್ ನನಗೆ ಗೊತ್ತು. ಸದರಿ ಲೋಕೇಶ್ ನೇ ಸದರಿ ಸಿಂಗ್ರಯ್ಯ ಹಾಗೂ ಅವರ ಹೆಂಡತಿಯನ್ನು ನೋಡಿಕೊಂಡು ಅವರ ಜೀವನಾಂಶದ ಆ ಎರಡು ಸ್ವತ್ತುಗಳನ್ನು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ತಾಯಿ ಆ ಎರಡು ಸ್ವತ್ತುಗಳನ್ನು ಸದರಿ ಲೋಕೇಶ್ ರವರಿಗೆ ವಿಲ್ ಮಾಡಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಏನು ಇಲ್ಲ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ವಿಲ್ ಆಧಾರದಲ್ಲಿ ಸದರಿ ಲೋಕೇಶ್ ಸ್ವಾಧೀನಾನುಭವ ಹೊಂದಿ ಅಡಿಕೆ ತೋಟ ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ಏನು ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

22. ನಾನು ಹಾಗೂ ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಇಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ದಾನ ಪತ್ರ, ಕ್ರಯ ಪತ್ರ ಹಾಗೂ ವಿಲ್ ಮೂಲಕ ಪರಭಾರೆ ಆಗಿರುವ ವಿಚಾರ ಗೊತ್ತಿದ್ದರೂ ಕೂಡ ಅದನ್ನು ಹೇಳದೆ ಹಾಗೂ ಅವರುಗಳನ್ನು ಪಕ್ಷಗಾರರನ್ನಾಗಿ ಮಾಡದೆ ಈ ಸುಳ್ಳು ದಾವೆ ಸಲ್ಲಿಸಿರುವುದು ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ದಾವಾದಲ್ಲಿ ಹೇಳಿರುವ ಪ್ರಕಾರ ನನಗೆ ಭಾಗದ ಹಕ್ಕು ಇಲ್ಲ ಅಂದರೆ ಸಾಕ್ಷಿ ನನಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಇತರೆ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಅವರ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**